(3)ವಿಷಯ : 2007–08ನೇ ಸಾಲಿನಲ್ಲಿ ಉಳ್ಳಾಲದಲ್ಲಿ ನಡೆದ ಗಲಭೆಗಳ ಸಂಧರ್ಭದಲ್ಲಿ ನಿರಪರಾಧಿಗಳ ವಿರುದ್ಧ ದಾಖಲಿಸಿದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿ (ಗೃಹ ಮತ್ತು ಸಾರಿಗೆ ಸಚಿವರು) ಯವರ ಗಮನ ಸೆಳೆಯುವುದು.

ಶ್ರೀ ಯು.ಟಿ.ಖಾದರ್ (ಮಂಗಳೂರು) :– ಮಾನ್ಯ ಅಧ್ಯಕ್ಷರೆ, ಸರ್ಕಾರವು ಆ ಪ್ರದೇಶದ ಯುವಕರ ಪರವಾಗಿ ಉತ್ತರವನ್ನು ಕೊಟ್ಟಿದೆ. ಏಕೆಂದರೆ, ಗಲಭೆಯಾದಾಗ ಶಾಸಕನಲ್ಲ. ಆದರೂ ನನಗೆ ಚೆನ್ನಾಗಿ ಗೊತ್ತು. ಕೆಲವೊಂದು ಕಿಡಿಗೇಡಿಗಳು ಪ್ರಾರಂಭ ಮಾಡಿದ ಗಲಭೆ ಬಹುಶಃ ಕರ್ಫ್ಯೂ ಹಾಕಿ ಮೂರು ದಿನ ಸಮಸ್ಯೆಗಳು ಉಂಟಾಗಿ, ಬಹಳಷ್ಟು ವಿದ್ಯಾರ್ಥಿಗಳು, ನಿರಪರಾಧಿಗಳು ಮನೆಗೆ ಹೋಗುತ್ತಿದ್ದವರನ್ನು ಹಿಡಿದುಕೊಂಡು ಕೇಸ್ ಹಾಕುವಂತಹ ಪರಿಸ್ಥಿತಿ ಆಗಿದೆ. ಆ ಒಂದು ಗಲಭೆಯಲ್ಲಿ ಅವರು ಮಾತ್ರವಲ್ಲ ನನ್ನ ಹೆಸರನ್ನೂ ಕೂಡ ಇಲ್ಲಿ ಬೆಂಗಳೂರಿನಿಂದ ಸೇರಿಸುವ ಪ್ರಯತ್ನ ಆಯಿತು. ಬಹುಶಃ ಇಲ್ಲಿಯವರು ಸೇರಿ ನನ್ನನ್ನು ಜೈಲಿಗೆ ಕಳುಹಿಸುವ ಪ್ರಯತ್ನವಪಟ್ಟರೆ. ಕ್ಷೇತ್ರದ ಜನರು ವಿಧಾನಸಭೆಗೆ ಆರಿಸಿ ಕಳುಹಿಸಿದರು. ಇದರಲ್ಲಿ ಬಹಳಷ್ಟು ಜನ ನಿರಪರಾಧಿಗಳು ಇದ್ದಾರೆ. ನನ್ನ ಕಳಕಳಿ ವಿನಂತಿ ಏನೆಂದರೆ, ಯಾರಾದರೂ ವಿದ್ಯಾರ್ಥಿಗಳು ಇಲ್ಲದಿದ್ದರೆ, ಪ್ರಪ್ರಥಮವಾಗಿ historyಯಲ್ಲಿ ಯಾವುದೇ ಕ್ರಿಮಿನಲ್ ಕೇಸ್ ಇಲ್ಲವೆಂದು ಗೊತ್ತಾಗಿದ್ದರೆ, ಯಾರಾದರೂ ಉತ್ತಮವಾಗಿದ್ದರೆ ಅವರನ್ನು ಕೈ ಬಿಡಬೇಕು. ಬೇರೆ ಬೇರೆ ಕಡೆಗಳಿಗೆ ಪಾಸ್‌ಪೋರ್ಟ್‌ಗಳಿಗೆ ಇನ್ನಿತರೆಯವುಗಳಿಗೆ ಕಷ್ಟವಾಗುತ್ತಿದೆ. ಆದ್ದರಿಂದ ಸರ್ಕಾರ ಇದನ್ನು ಮರುಪರಿಶೀಲಿಸಬೇಕು. ಒಂದು ವರದಿಯನ್ನು ಜಿಲ್ಲೆಯಿಂದ ತರಬೇಕು. ಪ್ರಪ್ರಥಮ ಬಾರಿಗೆ ಯಾರಿಗೆ ಕೇಸ್ ಹಾಕಿದ ಯುವಕರು ಇದ್ದಾರೆ, ಯಾರು ಬಹಳಷ್ಟು 40–50 ವರ್ಷದ ವಯಸ್ಸಿನ ಯುವಕರು ಇದ್ದಾರೆ ಅಥವಾ ವಿದ್ಯಾರ್ಥಿಗಳು ಯಾರಿದ್ದಾರೆ, ಪ್ರಪ್ರಥಮ ಬಾರಿಗೆ ಅಂತಹವರು ಯಾರಾದರೂ ಇದ್ದರೆ ಅವರಿಗೆ ಕ್ಷಮೆ ಕೊಡುವಂತಹ ಅವಕಾಶವನ್ನು ಸರ್ಕಾರದವರು ಮಾಡಬೇಕೆಂದು ಆ ಪ್ರದೇಶದ ಜನರ ಪರವಾಗಿ ಕೇಳಲಿಕ್ಕೆ ಇಚ್ಛೆಪಡುತ್ತೇವೆ.

ಶ್ರೀ ಎಸ್.ಸುರೇ:ಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಉಪ ಮುಖ್ಯಮಂತ್ರಿ ಹಾಗೂ ಗೃಹ ಮತ್ತು ಸಾರಿಗೆ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ, ಉಳ್ಳಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳೆದ 2007–08 ಸಾಲಿನಲ್ಲಿ ವಿಭಿನ್ನ ಕೋಮುಗಳ ನಡುವೆ ಹಲ್ಲೆ

ಪ್ರಕರಣಗಳು ನಡೆದಿರುವ ಬಗ್ಗೆ ಒಟ್ಟು 15 ಪ್ರಕರಣಗಳು ವರದಿಯಾಗಿರುತ್ತದೆ. ಸದರಿ ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋಪಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ. ಈ ಪ್ರಕರಣಗಳಲ್ಲಿ 05 ಪ್ರಕರಣಗಳು ಖುಲಾಸೆಯಾಗಿದ್ದು, 01 ಪ್ರಕರಣದಲ್ಲಿ "ಸಿ" ಅಂತಿಮ ವರದಿಯಾಗಿರುತ್ತದೆ, ಉಳಿದ 09 ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ.

ಈ ಪ್ರಕರಣಗಳನ್ನು ದಾಖಲಿಸುವಾಗ ಯಾರ್ಯಾರು ಪ್ರಕರಣದಲ್ಲಿ ಭಾಗಿಯಾಗಿರುತ್ತಾರೋ ಅವರುಗಳ ಮೇಲೆ ಪಿರ್ಯಾದಿನ ಆಧಾರದ ಮೇಲೆ ಪ್ರಕರಣಗಳು ದಾಖಲಾಗಿದೆ. ಈ ಪ್ರಕರಣಗಳಲ್ಲಿ ನಿಷ್ಪಕ್ಷಪಾತವಾಗಿ ತನಿಖೆ ಮಾಡಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಲಾಗಿದೆ. ಈ ಪ್ರಕರಣಗಳನ್ನು ಹಿಂತೆಗೆದುಕೊಳ್ಳುವುದರಿಂದ ಈ ಕೃತ್ಯದಲ್ಲಿ ಪಾಲ್ಗೊಂಡ ಆರೋಪಿಗಳು ಮುಂದೆಯೂ ಕೂಡಾ ಇಂತಹ ಕೃತ್ಯಗಳನ್ನು ಮುಂದುವರಿಸಿ ಕಾನೂನು ಸುವ್ಯವಸ್ಥೆಗೆ ಅಡ್ಡಿ ಪಡಿಸಿ ಮತ್ತು ಸಾರ್ವಜನಿಕ ಜೀವ ಹಾಗೂ ಸೊತ್ತು ಹಾನಿಗೊಳಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆದುದರಿಂದ ಈ ಪ್ರಕರಣಗಳನ್ನು ಹಿಂಪಡೆಯುವುದು ಸೂಕ್ತವಲ್ಲವೆಂದು ಅಭಿಪ್ರಾಯ ಪಡಲಾಗಿದೆ.

ಒಂದೇ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಎರಡು ಕೋಮುಗಳ ನಡುವೆ ಒಂದು ವರ್ಷದಲ್ಲಿ 15 ಪ್ರಕರಣಗಳು ಆಗಿವೆ. 15 ರಲ್ಲಿ ಇವತ್ತು 5 ಪ್ರಕರಣಗಳು ಇತ್ಯರ್ಥವಾಗಿವೆ. ಒಂದರಲ್ಲಿ 'ಸಿ' ರಿಪೋರ್ಟ್ ಆಗಿದೆ. ಇನ್ನು 9 ಪ್ರಕರಣ ನ್ಯಾಯಲಯದ ಮುಂದೆ ಇದೆ. ಗೃಹ ಇಲಾಖೆಯ ಅಭಿಪ್ರಾಯವೇನೆಂದರೆ, ಈಗಾಗಲೇ investigation ಮಾಡಿ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುವುದರಿಂದ ಈ ಪ್ರಕರಣಗಳಲ್ಲಿ ಯಾವುದೇ ರೀತಿಯ ಪ್ರಕರಣಗಳನ್ನು ವಾಪಸ್ಸು ತೆಗೆದುಕೊಳ್ಳುವುದು ಸೂಕ್ತವಲ್ಲ. It would become a precedent ಎಂದು ಗೃಹ ಇಲಾಖೆಯವರು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದ್ದರಿಂದ ಯಾವುದೇ ಕಾರಣಕ್ಕೂ ಇಲ್ಲಿ ನಿರಪರಾಧಿಗಳು ಅಪರಾಧಿಗಳು ಎನ್ನುವ ಪ್ರಶ್ನೆ ಇಲ್ಲ. ಎಲ್ಲಾ investigation ಮುಗಿದಿದೆ. Investigation ನಲ್ಲಿ ನಿರಪರಾಧಿಗಳು ಎಂದಿದ್ದರೆ ವಾಪಸು ತೆಗೆದುಕೊ-ಳ್ಳುತ್ತಿದ್ದೆವು. ಆದ್ದರಿಂದ ವಾಪಸ್ಸು ತೆಗೆದುಕೊಳ್ಳುವ ಪ್ರಮೇಯ ಇಲ್ಲ.

ಅಧ್ಯಕ್ಷರು :- ಶ್ರೀ ಖಮರುಲ್ಲಾ ಇಸ್ಲಾಂನವರು ಮಾತನಾಡುವುದು.